SRI S. M. SHEERNALY CHANDRASHEKHAR.—When are you going to fill up ? ಭರ್ತಿ ಮಾಡುವ ವಿಧಾನವನ್ನು ಹೇಳುತ್ತೀರಾ ?

SRI G.B SHANKAR RAO.—There are certain difficulties which I have already explained. According to the existing C&R Rules these posts have to be filled up by three modes, one by promotion of E.Os. and Head Masters. We have to prepare the Gradation List, because we have Head Masters from different high schools in different municipal high schools and T.D.B. high schools and we have to prepare the Gradation List of these persons. It took some time to recruit Lecturers as Principals. We have to prepare Gradation List. For this there is time. That is why there is delay.

ಒಬ್ಬರು ಮಾನ್ಯ ಸದಸ್ಯರು.—ಉತ್ತರ ಸರಿಯಾಗಿ ಸಿಕ್ಕಿತಲ್ಲ !

ಶ್ರೀ ಜಿ. ಬಿ. ಶಂಕರ ರಾವ್.—ವಿಳಂಬವಾದುದಕ್ಕೆ ಕಾರಣ ಹೇಳಿದ್ದೇನೆ.

Compulsory Primary Education in the State

606 SRI G. RAJU GOWDA (Hanur).—Will the Minister of State for Primary and Secondary Education be pleased to state :—

(a) the year in which the Compulsory Primary Education has come into force in the State ;

(b) whether the scheme has been proved fully fruitful for which Purpose it was introduced : if not, the difficulties therefor ?

SMT. NAGAMMA C. KESHAVAMURTHY (Minister of State for Primary and Secondary Education).—

(a) From the academic year of 1961–62.

(b) No. Economic condition of parents and social problems are the main difficulties.

ಶ್ರೀ ಜಿ. ರಾಜುಗೌಡ.—ಈ ಯೋಜನೆಯು ವಿಫಲತೆಯಿಂದ ರಾಜ್ಯದಲ್ಲಿ ನಲವತ್ತಕ್ಕ ಅನೇಕ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಲು ಸಾಧ್ಯವಿಲ್ಲವೆಂದು ಸರ್ಕಾರಕ್ಕೆ ಮನವರಿಕೆಯಾದ ಮೇಲೆ ಇದಕ್ಕೆ ಪರ್ಯಾಯ ವ್ಯವಸ್ಥೆಯನ್ನೇನಾದರೂ ಮಾಡಿದ್ದೀರಾ ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—೧೯೬೧ ರ ಎನರೋಲ್‌ಮೆಂಟ್ ಪ್ರಕಾರ ನಮ್ಮ ರಾಜ್ಯದಲ್ಲಿ ೧೦೦ ಕ್ಕೆ ೯೫ ರಷ್ಟು ಮಕ್ಕಳು ಶಾಲೆಗಳಿಗೆ ಸೇರಿದ್ದಾರೆ. ಆದರೆ, ಸೇರುವುದು ಒಂದು ಕಡೆಯಾದರೆ, ಮತ್ತೊಂದು ಕಡೆ ೨ನೇ ತರಗತಿಯಲ್ಲಿ ಒಂದಿಷ್ಟು ಮಂದಿ ಶಾಲೆ ಬಿಡುತ್ತಾರೆ. ೪ನೇ ತರಗತಿಗೆ ಬರುವ ವೇಳೆಗೆ ೧೦೦ಕ್ಕೆ ೫೦ ರಷ್ಟು ಮಕ್ಕಳು ಶಾಲೆ ಬಿಡುವ ಒಂದು ಪರಿಸ್ಥಿತಿ ಇದೆ. ಇದೆಲ್ಲವನ್ನು ಮನಗಂಡು ಸರ್ಕಾರ ನಾನಾ ಯೋಜನೆಗಳನ್ನು ಹಾಕಿಕೊಂಡು ಶಾಲೆಗೆ ಮಕ್ಕಳನ್ನು ಆಕರ್ಷಿಸುವ ಪ್ರಯತ್ನ ಮಾಡುತ್ತಿದ್ದೇವೆ. ಮೊದಲನೆಯದಾಗಿ, ಮಿಡ್—ಡೇ ಮೀಲ್ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಎರಡನೆಯದಾಗಿ ವೀಕರ್ ಸೆಕ್ಷನ್ ಮಕ್ಕಳಿಗೆ ಆಟಿಂಡೆನ್ಸ್ ಸ್ಕಾಲರ್‌ಷಿಪ್, ಟಿಕ್ಸ್, ಬುಕ್ಸ್ ಯೂನಿಫಾರಮ್ಸ್ ಕೊಡುವ ಕಾರ್ಯ ಕ್ರಮವನ್ನು ರೂಪಿಸಿದ್ದೇವೆ. ಇದಲ್ಲದೆ, ಇತ್ತೀಚೆಗೆ ಜ್ಞಾನ ಮಂದಿರಗಳನ್ನು ತೆರೆಯುವ ಯೋಜನೆಯನ್ನು ಹಾಕಿಕೊಂಡು ಮಕ್ಕಳು ಕಲಿಯಲು ಒಳ್ಳೆಯ ವಾತಾವರಣವನ್ನು ಸೃಷ್ಟಿ ಮಾಡಿ ಅವರವರ ಪ್ರದೇಶಗಳಲ್ಲಿಯೇ ಓದುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದೇವೆ.

ಹಿಂದುಳಿದವರ ಹಾಗೂ ಹರಿಜನರ ವಿದ್ಯಾರ್ಥಿನಿಲಯಗಳನ್ನು ತೆರೆಯುವುದು — ಹೀಗೆ ನಾನಾ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡು ಹೆಚ್ಚು ಹೆಚ್ಚು ಮಕ್ಕಳನ್ನು ಶಾಲೆಗೆ ಸೇರಿಸುವುದಕೆ ಪ್ರಯತ್ನ ಮಾಡಿದ್ದೇವೆ.

ಶ್ರೀ ಜಿ. ರಾಜಂಗೌಡ.—ಇಷ್ಟೆಲ್ಲ ಮಾಡಿದರೂ ಕೂಡ ಈ ಯೋಜನೆ ವಿಫಲವಾಗಿದೆ ಎಂಬುದನ್ನು ಒಪ್ಪಿಕೊಂಡಿದ್ದೀರಿ. ಆದುದರಿಂದ, ಇದಕ್ಕೆ ಬದಲಾಗಿ ಬೇರೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಆ ರೀತಿಯಾಗುವುದಕ್ಕೆ ಮುಖ್ಯ ಕಾರಣವೆಂದರೆ ಪೋಷಕರ ಆರ್ಥಿಕ ಪರಿಸ್ಥಿತಿ ಮತ್ತು ಕೌಟುಂಬಿಕ ತೊಂದರೆಗಳು ಎಂದು ಹೇಳಬಹುದು. ಆದುದರಿಂದ ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ನಾನ್–ಫಾರ್ಮಲ್ ಎಜುಕೇಷನ್ ಎಂಬ ಯೋಜನೆಯನ್ನು ಹೆಚ್ಚಿನ ರೀತಿಯಲ್ಲಿ ಕಾರ್ಯಗತ ಮಾಡುವುದಕ್ಕೆ ಯೋಜನೆ ಹಾಕಲಾಗಿದೆ. ಅಲ್ಲದೆ, ೬ರಿಂದ ೧೪ ವರ್ಷದವರೆಗಿನ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡತಕ್ಕ ಬೆ ಕ್ಷೋಜನೆಯನ್ನು ಕೂಡ ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಹಾಕಿಕೊಂಡಿದ್ದೇವೆ.

ಶ್ರೀ ಜಿ. ಹೆಚ್. ಪಟೇಲ್ —ಕಡ್ಡಾಯ ಶಿಕ್ಷಣ ಎಂಬ ಹೆಸರಿನಲ್ಲಿ ಬೇರೆ ಏನೋ ಕಾರಣಗಳನ್ನು ಕೊಟ್ಟು ಸರ್ಕಾರ ತನ್ನ ಹೊಣೆಯನ್ನು ತಪ್ಪಿಸಿಕೊಳ್ಳುವುದರಲ್ಲಿ ಅರ್ಥವಿಲ್ಲ. ಕಡ್ಡಾಯ ಶಿಕ್ಷಣ ಎಂದರೆ ಏನೇ ಕಷ್ಟ ಬಂದರೂ ಶಿಕ್ಷಣವನ್ನು ಕಡ್ಡಾಯವಾಗಿ ಕೊಡಲೇಬೇಕೆಂಬುದು ಇದು ನಿಮ್ಮ ಕಡ್ಡಾಯ ಶಿಕ್ಷಣದ ತತ್ವ. ಆದರೆ ಇದಕ್ಕೆ ಆರ್ಥಿಕ ಮತ್ತು ಸಾಮಾಜಿಕ ತೊಂದರೆಗಳು ಕಾರಣವೆಂದು ಹೇಳುವುದು ಸರಿಯೇ ? ಆರ್ಥಿಕ ಮತ್ತು ಸಾಮಾಜಿಕ ಕಾರಣಗಳು ನಿಜವಾದರೆ ಕಡ್ಡಾಯ ಶಿಕ್ಷಣ ಎಂಬುದರ ಅರ್ಥವೇನು ಎಂದು ಮಾನ್ಯ ಮಂತ್ರಿಯವರನ್ನು ಕೇಳುತ್ತೇನೆ. ಈ ಒಂದು ಕಾನೂನಿನಲ್ಲಿ ಶಿಕ್ಷೆ ಮಾಡತಕ್ಕ ಅವಕಾಶ ಕೂಡ ಇದೆ. ಆದುದರಿಂದ, ಮಕ್ಕಳು ಶಾಲೆಗಳಿಗೆ ಬರುವುದಕ್ಕೆ ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಿ ಯಾವ ತಂದೆತಾಯಿಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ ಅಂಥವರನ್ನು ಶಿಕ್ಷಿಸತಕ್ಕ ಕೆಲಸ ಮಾಡಬಹುದು. ಇವೆರಡನ್ನು ಏಕ ಕಾಲದಲ್ಲಿ ಮಾಡಿದ್ದೀರಾ ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಕಡ್ಡಾಯ ಶಿಕ್ಷಣದ ಕಾನೂನಿನಲ್ಲಿ ಯಾರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ ಅಂಥ ತಂದೆ ತಾಯಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಆದರೆ ಅದಕ್ಕಿಂತ ಹೆಚ್ಚಾಗಿ ತಂದೆ ತಾಯಿಗಳ ಮನಸ್ಸನ್ನು ಒಲಿಸಿ ಇನ್ಸೆಂಟೀವ್ ಕೊಟ್ಟು ಹೆಚ್ಚು ಆಕರ್ಷಕರನ್ನಾಗಿ ಮಾಡಿ ಮಕ್ಕಳನ್ನು ಶಾಲೆಗಳಿಗೆ ಬರುವಂತೆ ಮಾಡಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ.

ಶ್ರೀ ಜಿ. ರಾಜಂಗೌಡ.—ಮಕ್ಕಳನ್ನು ಶಾಲೆಗಳಿಗೆ ಆಕರ್ಷಿಸಬೇಕೆಂಬ ಉದ್ದೇಶದಿಂದ ಸರ್ಕಾರ ಕೆಲವು ರಿಯಾಯಿತಿಗಳನ್ನು ತೋರಿಸಿದೆ. ಸ್ಕಾಲರ್‌ಷಿಪ್ ಕೊಡುವುದು, ಪುಸ್ತಕಗಳನ್ನು ಕೊಡುವುದು ಇತ್ಯಾದಿ ಯೋಜನೆಗಳಿವೆ. ಆದರೆ ಅದೆಲ್ಲಕ್ಕೆ ಬದಲಾಗಿ ಯಾರು ಬಡತನದ ರೇಖೆಯಿಂದ ಕೆಳಗಡೆ ಇದ್ದಾರೆ ಅಂಥ ಕುಟುಂಬಗಳಿಗೆ ೨೫೦ ರೂಪಾಯಿಗಳನ್ನು ಪ್ರೋತ್ಸಾಹ ಧನದ ರೂಪದಲ್ಲಿ ಕೊಟ್ಟು ಮಕ್ಕಳನ್ನು ಶಾಲೆಗಳಿಗೆ ಆಕರ್ಷಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಹಣ ಕೊಡುವ ಬಗ್ಗೆ ಸರ್ಕಾರಕ್ಕೆ ಬಹಳ ಕಹಿ ಅನುಭವವಾಗಿದೆ. ಯಾರು ಅಟೆಂಡೆನ್ಸ್‌ನಲ್ಲಿ ಚೆನ್ನಾಗಿರುತ್ತಾರೋ ಅಂಥವರಿಗೆ ಅಟೆಂಡೆನ್ಸ್ ಸ್ಕಾಲರ್‌ಷಿಪ್ ಎಂದು ೪೦ ರೂಪಾಯಿಗಳನ್ನು (ಮಕ್ಕಳ ತಂದೆತಾಯಿಗಳಿಗೆ) ಕೊಡುವ ಯೋಜನೆ ಇತ್ತು. ಆದರೆ ಅದು ಮಕ್ಕಳಿಗೆ ತಲುಪುತ್ತಿರಲಿಲ್ಲ. ಆದುದರಿಂದ, ಮಕ್ಕಳಿಗೆ ನೇರವಾಗಿ ಆ ಸಹಾಯ ತಲುಪಬೇಕೆಂಬ ಉದ್ದೇಶದಿಂದ ಪಠ್ಯಪುಸ್ತಕಗಳನ್ನು ಕೊಡುವುದು, ಸಮವಸ್ತ್ರಗಳನ್ನು ಕೊಡುವುದು ಮುಂತಾದ ಯೋಜನೆಗಳನ್ನು ಈಗ ಕೈಗೊಳ್ಳಲಾಗಿದೆ ಆದುದರಿಂದ, ೨೫೦ ರೂಪಾಯಿಗಳನ್ನು ತಂದೆ ತಾಯಿಗಳ ಕೈಗೆ ಕೊಟ್ಟರೆ ಅದು ಮಗುವಿನ ವಿದ್ಯಾಭ್ಯಾಸಕ್ಕೆ ಸೇರುತ್ತದೆಂದು ನಾವು ಖಂಡಿತ ನಿರೀಕ್ಷಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಜೆ. ಎಚ್. ಪಟೇಲ್.—ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ ನಿಮಗೆ ಜನರನ್ನು ವಿದ್ಯಾವಂತರನ್ನಾಗಿ ಮಾಡುವ ಇಚ್ಛೆಯಿಲ್ಲ, ಅವರು ವಿದ್ಯಾವಂತರಾದರೆ ನೀವು ಉಳಿಯುವುದಿಲ್ಲ ಎನ್ನುವ ಕಾರಣಕೋಸ್ಕರವಾಗಿ ಆ ಮಕ್ಕಳನ್ನು ಅವಿದ್ಯಾವಂತರನ್ನಾಗಿ ಮಾಡುತ್ತಿದ್ದೀರಿ ಎನ್ನುವ ಮಾತನ್ನು ಒಪ್ಪುತ್ತೀರಾ ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಸ್ವಾಮಿ, ನಾನು ಈ ಒಂದು ಪ್ರಶ್ನೆಗೆ ಉತ್ತರ ಹೇಳುವುದಿಲ್ಲ. ಇದು ಇಡೀ ರಾಜ್ಯಕ್ಕೆ ಗೊತ್ತಿರತಕ್ಕದ್ದು. ವಿದ್ಯಾ ಕ್ಷೇತ್ರದಲ್ಲಿ ನಮ್ಮ ರಾಜ್ಯವು ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದೇವೆ. ಆದುದರಿಂದ ನಾವು ವಿದ್ಯೆಗೋಸ್ಕರವಾಗಿ ಪ್ರೋತ್ಸಾಹವನ್ನು ಕೊಡುತ್ತಿಲ್ಲವೆಂದು ಹೇಳತಕ್ಕ ಮಾತು ಸರಿಯಲ್ಲ. ಇತ್ತೀಚೆಗೆ ಮಾನ್ಯ ಸದಸ್ಯರಾದ ಶ್ರೀ ಪಟೇಲ್‌ರವರು ತಮ್ಮ ಕ್ಷೇತ್ರದಲ್ಲಿ ಒಂದು ಹೈಸ್ಕೂಲ್ ಬೇಕು ಬೇಕು ಎಂದು ಒತ್ತಾಯ ಮಾಡುತ್ತಿದ್ದರು. ಅದಕ್ಕೆ ನಾವು ಅಲ್ಲಿಗೆ ಒಂದು ಹೈಸ್ಕೂಲನ್ನು ಸಹ ಮಂಜೂರು ಮಾಡಿಕೊಟ್ಟಿದ್ದೇವೆ. ಇದರಿಂದ ವಿದ್ಯೆ ಅಲ್ಲಿ ಪ್ರಗತಿ ಆಗುವುದಕ್ಕೆ ಸಾಧ್ಯತೆ ಇಲ್ಲವೆ ?

ಶ್ರೀ ಕೆ. ಪ್ರಭಾಕರ್.—ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಜಾರಿಗೆ ತರುವುದಕ್ಕೆ ಸಾಮಾಜಿಕ ಸಮಸ್ಯೆಗಳು ಅಡ್ಡಿ ಇದೆ ಎಂದು ಹೇಳಿದ್ದೀರಿ, ಆ ರೀತಿಯಾಗಿ ಸಾಮಾಜಿಕವಾಗಿ ಸಮಸ್ಯೆಗಳು ಅಡ್ಡಿಯಾಗಿರತಕ್ಕಂಥವುಗಳು ಯಾವುವು ಎಂಬುದನ್ನು ಹೇಳುತ್ತೀರಾ ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳು ಎಂದು ಹೇಳಿದರೆ ಮನೆಯಲ್ಲಿ ಹೆಚ್ಚು ಮಕ್ಕಳು ಇರುವುದು ಅಂದರೆ ಕುಟುಂಬ ಯೋಜನೆಯನ್ನು ಆಚರಣೆ ಮಾಡದೇ ಇರುವುದು ಒಂದು ಕಾರಣವಾಗಿದೆ ಎಂದು ಹೇಳಬಹುದು. ಮಕ್ಕಳನ್ನು ಶಾಲೆಗೆ ಕಳುಹಿಸದೇ ಇರುವುದರ ಬಗ್ಗೆ ನಾವು ಹಳ್ಳಿಗಳಲ್ಲಿ ಕೇಳಿದಾಗ ನನ್ನ ಮಗಳು ಶಾಲೆಗೆ ಹೋದರೆ ಇನ್ನು ಚಿಕ್ಕ ೨—೩ ಮಕ್ಕಳನ್ನು ನೋಡಿಕೊಳ್ಳುವವರು ಯಾರು ಎಂದು ಹೇಳುತ್ತಾರೆ. ಈ ಎಲ್ಲಾ ಕಾರಣಗಳಿಂದ ಈ ಒಂದು ಕಡ್ಡಾಯ ಶಿಕ್ಷಣ ನಾನು ಮೊದಲೇ ಹೇಳಿದ ಹಾಗೆ ಮೊದಲನೆಯ ತರಗತಿಯಲ್ಲಿ ಸಾಕಷ್ಟು ಎನ್‌ರೋಲ್‌ಮೆಂಟ್ ಆಗಿದೆ ಇದು ಬೇರೆ ರಾಜ್ಯಗಳಿಗಿಂತ ಚೆನ್ನಾಗಿ ಆಗಿದೆ ಎಂದು ಸಂತೋಷದಿಂದ ಹೇಳುತ್ತಿದ್ದೇನೆ ಆದರೆ ಇದರಲ್ಲಿರತಕ್ಕ ಡ್ರಾಪ್ ಔಟ್ಸ್ ಏನಿದೆ ಅದನ್ನು ಸರಿಪಡಿಸುವುದಕ್ಕೂ ಸಹ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

Supply of Drinking Water to Mudabidari town Dakshina Kannada District.

(655) SRI K. RAMA BHAT (Puttur)—Will the Minister for Housiug and Urban Development be pleased to state:—

(a) the measures taken by the Government to supply drinking water to Mudabidare Town in Dakshina Kannada District;

(b) the cost of this project;

(c) when drinking water would be supplied to Mudabidare town ?

SRI DHARAM SINGH.—Minister for Housing and Urban Development.

(a) 1) The Water Supply Scheme to Mudabidari Town was commissioned during the year 1972.

2) During the Mahamastakabhisheka of Shravanabelagola, augmentation of existing Water Supply Scheme was takeu up Sri Bore-wells were drilled to cater to the needs of pilgrms.